**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 560001**

ಸಂಖ್ಯೆ: DPI-CPI0C1-2(PROM)/3/2022/E-877390 ದಿನಾಂಕ: 04-11-2022

**ರವರಿಗೆ,**

ಅಪರ ಆಯುಕ್ತರು **"ಅತ್ಯಂತ ತುರ್ತು "**
ಸಾರ್ವಜನಿಕ ಶಿಕ್ಷಣ ಇಲಾಖೆ
ಕಲಬುರಗಿ/ಧಾರವಾಡ

ಮಾನ್ಯರೆ,

**ವಿಷಯ:** ಗ್ರೂಪ್-"ಎ"ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡುವ ಬಗ್ಗೆ.

**ಉಲ್ಲೇಖ:** (1) ಈ ಕಚೇರಿ ಸಮ ಸಂಖ್ಯೆ ಪತ್ರ ದಿನಾಂಕ: 20-09-2022
(2) ಸರ್ಕಾರದ ಪತ್ರ ಸಂಖ್ಯೆ: ಇಪಿ 236 ಡಿಜಿಎಂ 2022, ದಿನಾಂಕ: 31-10-2022

************

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಬಿ ವೃಂದದ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ವೃಂದದ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಗ್ರೂಪ್-ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿ/ ತತ್ಸಮಾನ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡುವ ಸಂಬಂಧ ಅರ್ಹ ಅಧಿಕಾರಿಗಳ ಪಟ್ಟಿಯನ್ನು ಲಗತ್ತಿಸಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಗ್ರೂಪ್-ಎ ಕಿರಿಯ ಶ್ರೇಣಿ ವೃಂದದ ಮುಂಬಡ್ತಿಗೆ ಸ್ವೀಕೃತವಾದ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿತ್ತು ಅದರನ್ವಯ ಉಲ್ಲೇಖ(2)ರ ಪತ್ರದಲ್ಲಿ, ಮುಂಬಡ್ತಿಗೆ ಪ್ರಸ್ತಾವನೆ ಸಲ್ಲಿಸಿರುವ ಅಧಿಕಾರಿಗಳು ನಿಯೋಜನೆ ಮೇಲೆ ಇತರೆ ಇಲಾಖೆಯಲ್ಲಿ ಕಾರ್ಯನಿರ್ವಹಿಸಿರುವ ವಿವರಗಳನ್ನು ಹಾಗೂ ನಿಯೋಜನೆ ಅವಧಿಯಲ್ಲಿ ಇಲಾಖಾ ವಿಚಾರಣೆ ಬಗ್ಗೆ ಮಾಹಿತಿ ನೀಡಲು ಸೂಚಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ತಮ್ಮ ಕಛೇರಿಯಿಂದ ಗ್ರೂಪ್-ಎ ಕಿರಿಯ ಶ್ರೇಣಿ ವೃಂದದ ಮುಂಬಡ್ತಿಗೆ ಪ್ರಸ್ತಾವನೆ ಸಲ್ಲಿಸಿರುವ ಅಧಿಕಾರಿಗಳು ನಿಯೋಜನೆ ಮೇಲೆ ಇತರೆ ಇಲಾಖೆಯಲ್ಲಿ ಕಾರ್ಯನಿರ್ವಹಿಸಿರುವ ವಿವರಗಳನ್ನು ಹಾಗೂ ನಿಯೋಜನೆ ಅವಧಿಯಲ್ಲಿ ಶಿಸ್ತು ಕ್ರಮ/ ಇಲಾಖ ವಿಚಾರಣೆ ಬಾಕಿ ಇರುವ/ ಇಲ್ಲದಿರುವ ಬಗ್ಗೆ ಪರಿಶೀಲಿಸಿ ದೃಢೀಕೃತ ಮಾಹಿತಿಯನ್ನು ದಿನಾಂಕ: 05-11-2022ರ ಮಧ್ಯಾಹ್ನ 4:00 ಗಂಟೆಯೊಳಗೆ ಈ ಕಛೇರಿಯ e-mai ID:est1cpi@gmail.com ಗೆ ಸಲ್ಲಿಸಲು ಸೂಚಿಸಿದೆ.

**(ಕಛೇರಿ ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

**ಡಾ. ರೂಪಶ್ರೀ. ಎಸ್., ಕ.ಆ.ಸೇ**
ಜಂಟಿ ನಿರ್ದೇಶಕರು (ಆಡಳಿತ)

**ಪ್ರತಿಗಳನ್ನು:-**

1. ಗೌರವಗಳೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ,ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ರಾಜ್ಯದ ಎಲ್ಲಾ ನಿರ್ದೇಶಕರು/ ಸಹನಿರ್ದೇಶಕರು ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.
3. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಉಪನಿರ್ದೇಶಕರು (ಆಡಳಿತ)/ (ಅಭಿವೃದ್ಧಿ) ರವರಿಗೆ ಕಳುಹಿಸುತ್ತಾ, ತಮ್ಮ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಬಂಧಿಸಿದ ಅಧಿಕಾರಿಗಳಿಂದ "ತುರ್ತಾಗಿ" ಪಡೆದು ದೃಢೀಕರಿಸಿ ನಿಗಧಿ ಪಡಿಸಿದ್ದ ದಿನಾಂಕದೊಳಗೆ ಸಲ್ಲಿಸಲು ಕೋರಿದೆ.
4. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ, ಸಾ.ಶಿ.ಇ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಇಲಾಖಾ ವೆಬ್ ಸೈಟ್ ನಲ್ಲಿ ಅಪ್ ಲೋಡ್ ಮಾಡಲು ಕೋರಿದೆ.
5. ಸಂಬಂಧಿಸಿದ ಅಧಿಕಾರಿಗೆ